ಕರ್ನಾಟಕ ಸರ್ಕಾರ, ಕಂದಾಯ ಇಲಾಖೆ.
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
OFFICE OF THE DEPUTY COMMISSIONER, SHIMOGA DISTRICT, SHIMOGA.
ದೂರವಾಣಿ/PHONE: - 08182-271101/221010/222082; ಫ್ಯಾಕ್ಸ್/FAX: - 277082; ಇ-ಮೇಲ್/E-

ಅನುಬಂಧ-5

NO. ALN(2).SR-087/16-17 (62566/16-17 )

ದಿನಾಂಕ:1?-01-2017.

## ॥ ಅಧಿಕೃತ ಜ್ಞಾಪನ ॥

ವಿಷಯ:- ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ,ನಂ. 20 ರಲ್ಲಿ 1-07 ಎಕರೆ ಹಾಗೂ ಸ,ನಂ. 21 ರಲ್ಲಿ 0-26 ಗುಂಟೆ ಹಾಗೂ ಸ,ನಂ. 22 ರಲ್ಲಿ 1-03 ಎಕರೆ ಒಟ್ಟು 2-36 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ರವರ ಮನವಿ ಬಗ್ಗೆ.

ಉಲ್ಲೇಖ:- ಈ ಕಾರ್ಯಾಲಯದ ಆದೇಶ ಸಂಖ್ಯೆ:LRF.CR.34/16-17, ಆದೇಶ ದಿನಾಂಕ;20/07/2016.

2. ಭೂಪರಿವರ್ತನಾ ಶುಲ್ಕ ರೂ 94743/- ಮತ್ತು ಪೋಡಿ ಶುಲ್ಕ ರೂ 125/- , ದಂಡ ಶುಲ್ಕ ರೂ /-ಒಟ್ಟು ರೂ **95118/-** ಗಳನ್ನು ಚಲನ್ ನಂಬರ್, J.2004740. ದಿನಾಂಕ; 06/01/2017 ರಂದು ಸರ್ಕಾರಕ್ಕೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

~*~

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಭೂಪರಿವರ್ತನಾ ಶುಲ್ಕ ರೂ 94743/- ಮತ್ತು ಪೋಡಿ ಶುಲ್ಕ ರೂ 125/- , ಹಾಗೂ ದಂಡ ಶುಲ್ಕ ರೂ /- ಒಟ್ಟು ರೂ **95118/-**ಗಳನ್ನು ಅರ್ಜಿದಾರರು ಉಲ್ಲೇಖ (2) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರಾದ ಅಧ್ಯಕ್ಷರು, ಕರ್ನಾಟಕ ಫ್ರಾನ್ಸ್ ಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ರವರ ಅರ್ಜಿಯನ್ನು ಪರಿಗಣಿಸಿ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ,ನಂ. 20 ರಲ್ಲಿ 1-07 ಎಕರೆ ಹಾಗೂ ಸ,ನಂ. 21 ರಲ್ಲಿ 0-26 ಗುಂಟೆ ಹಾಗೂ ಸ,ನಂ. 22 ರಲ್ಲಿ 1-03 ಎಕರೆ ಒಟ್ಟು 2-36 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪರಿಭಾವಿತ ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ

ಪ್ರಾಧಿಕಾರದಿಂದ ಅಂದರೆ /ಸಿಎಂಸಿ/ಟಿಎಂಸಿ/ ಮಾರಿನ್ಸ ನಿಯಂತ್ರಣಾ ಮಂಡಳಿ/ ಗ್ರಾಮ ಪಂಚಾಯಿತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ನಿಯಮಾನುಸಾರ ನಗರಾಭಿವೃದ್ಧಿ ಪ್ರಾಧಿಕಾರ / ನಗರ ಯೋಜನಾ ಇಲಾಖೆಯಿಂದ ಅನುಮೋದಿತ ನಕ್ಷೆ ಪಡೆಯದೇ, ರವಿನ್ಯೂ ನಿವೇಶನಗಳನ್ನಾಗಿ ತುಂಡು ಮಾಡಿ ಪರಭಾರೆ ಮಾಡತಕ್ಕದ್ದಲ್ಲ.
3. ಈ ಪರಿವರ್ತಿತ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು ಹಾಗೂ ಪರಭಾರೆ ಮಾಡತಕ್ಕದ್ದಲ್ಲ.
4. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಶಿವಮೊಗ್ಗ ನಗರಾಭಿವೃದ್ಧಿ ಮಂಡಳಿ/ನಗರ ಯೋಜನ ಘಟಕ ಇತ್ಯಾದಿರವರಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.
5. ಸಂಬಂಧಿಸಿದ ನಗರ ಯೋಜನೆ ಪ್ರಾಧಿಕಾರದಿಂದ ನಕ್ಷೆಗೆ ಅನುಮೋದನೆ ಪಡೆಯದೆ ನಗರಸಭೆ/ಪುರಸಭೆ ಗ್ರಾಮ ಪಂಚಾಯ್ತಿಯವರು ಹಕ್ಕು ನೋಂದಾವಣೆ ಮಾಡತಕ್ಕದ್ದಲ್ಲ.
6. ಇತರ ಅವಶ್ಯವಾದ ರಸ್ತೆ ಮಾರ್ಜಿನ್, ಖಾಲಿ ಜಾಗ ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿಪಡಿಸಿದ ಇತ್ಯಾದಿಗಳನ್ನು (ಪ್ರಾಧಿಕಾರ/ ನಗರ ಪಾಲಿಕೆ/ಇತ್ಯಾದಿ) ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ಧಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
7. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.
8. ಈ ಜಮೀನಿಗೆ ತಾಕು ಪೋಟ್ ಖರಾಬ್ ಇದ್ದಲ್ಲಿ ಇದನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು . ಹಾಗೂ ತಾಕು 0-00 ಗುಂಟೆ “ಬಿ” ಖರಾಬಿನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ “ಬಿ” ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
9. ಸರ್ಕಾರದ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗದಿತ ಅಂತರವನ್ನು ಕಾದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು .
10. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು. ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಇದಕ್ಕೆ

ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

**ಷೆಡ್ಯೂಲ್ ವಿವರ**

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ,ನಂ. 20 ರಲ್ಲಿ 1-07 ಎಕರೆ ಹಾಗೂ ಸ,ನಂ. 21 ರಲ್ಲಿ 0-26 ಗುಂಟೆ ಹಾಗೂ ಸ,ನಂ. 22 ರಲ್ಲಿ 1-03 ಎಕರೆ ಒಟ್ಟು 2-36 ಎಕರೆ ಶೈಕ್ಷಣಿಕ ಉದ್ದೇಶಕ್ಕೆ ಪರಿಭಾವಿತ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ :

| | ಸ,ನಂ. 20 | ಸ,ನಂ.21 | ಸ,ನಂ.22 |
|---|---|---|---|
| ಪೂರ್ವಕ್ಕೆ | ಸ,ನಂ.23 | ಸ,ನಂ.23 | ಸ,ನಂ.23 |
| ಪಶ್ಚಿಮಕ್ಕೆ | ಸ,ನಂ.16 | ಸ,ನಂ.15 | ಸ,ನಂ.15 |
| ಉತ್ತರಕ್ಕೆ | ಸ,ನಂ.21 | ಸ,ನಂ.22 | ರಸ್ತೆ |
| ದಕ್ಷಿಣಕ್ಕೆ | ಸ,ನಂ.19 | ಸ,ನಂ.20 | ಸ,ನಂ.21 |

(ಕಟಿಜಿಲ)

ಅಪರ ಜಿಲ್ಲಾಧಿಕಾರಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ.**

1. ತಹಶೀಲ್ದಾರ್ ಸೊರಬ ತಾಲ್ಲೂಕುರವರಿಗೆ ಮೂಲಕಡತ ಹಾಗೂ ಚಲನ್ ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ನ ಮೇಲ್ಕಂಡ ವಿಸ್ತೀರ್ಣ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿಯಲ್ಲಿ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಸಹಾಯಕ ನಿರ್ದೇಶಕರು, ನಗರ ಹಾಗೂ ಗ್ರಾಮಾಂತರ ಯೋಜನ ಶಿವಮೊಗ್ಗ ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಅರ್ಜಿದಾರರಾದ ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ರವರಿಗೆ.
5. ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳ ಪರವಾಗಿ
ಶಿವಮೊಗ್ಗ ಜಿಲ್ಲೆ.

ಕರ್ನಾಟಕ ಸರ್ಕಾರ, ಕಂದಾಯ ಇಲಾಖೆ.
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
OFFICE OF THE DEPUTY COMMISSIONER, SHIMOGA DISTRICT, SHIMOGA.
ದೂರವಾಣಿ/PHONE: - 08182-271101/221010/222082; ಫ್ಯಾಕ್ಸ್/FAX: - 277082; ಇ-ಮೇಲ್/E-MAIL: - deo.shimoga@gmail.com

56760 - SMGDC.LRF.CR-034/16-17 (1057/16-17) ದಿನಾಂಕ 20-7-2016.

## ಅಧಿಕೃತ ಜ್ಞಾಪನ

ವಿಷಯ: - ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ.ನಂ 20 ರಲ್ಲಿ 1-07, ಸ.ನಂ 21 ರಲ್ಲಿ 0-26 ಮತ್ತು ಸ.ನಂ 22 ರಲ್ಲಿ 1-03 ಒಟ್ಟು ವಿಸ್ತೀರ್ಣ 2-36 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ಇವರು ಕರ್ನಾಟಕ ಭೂಸುಧಾರಣಾ ಕಾಯ್ದೆ ಕಲಂ 109 ರಡಿ ಜಮೀನು ದಾನವಾಗಿ ಪಡೆಯಲು ಅನುಮತಿ ಕೋರಿದ ಕುರಿತು.

ಉಲ್ಲೇಖ: - 1. ಕರ್ನಾಟಕ ರಾಜ್ಯಪತ್ರ ದಿನಾಂಕ 13-8-2015 ರಲ್ಲಿ ಪ್ರಕಟವಾದ Karnataka Act No 33, 2015 ದಿನಾಂಕ 12-8-2015

2.ಸರ್ಕಾರದ ಅಧಿಸೂಚನೆ ಸಂಖ್ಯೆ ಸಂ.ವ್ಯಾ. ಶಾ.ಇ. 47 ಶಾಸನ 2001 ದಿನಾಂಕ 23-4-2003

3.ಉಪ ವಿಭಾಗಾಧಿಕಾರಿಗಳು, ಸಾಗರ ಉಪ ವಿಭಾಗ, ಸಾಗರ ಇವರ ಪತ್ರ ಸಂಖ್ಯೆ ಭೂ.ಸು(03) ವಿ ವ 03/2015-16 ದಿ: 19-3-2016.

4. ತಹಶೀಲ್ದಾರ್ ಸೊರಬ ಇವರ ಪತ್ರ ಸಂ ಭೂ ಸು ವಿ ವ 137/15-16 ದಿನಾಂಕ 8-1-2016.

~*~

ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ.ನಂ 20 ರಲ್ಲಿ 1-07, ಸ.ನಂ 21 ರಲ್ಲಿ 0-26 ಮತ್ತು ಸ.ನಂ 22 ರಲ್ಲಿ 1-03 ಒಟ್ಟು ವಿಸ್ತೀರ್ಣ 2-36 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ರ ಕಲಂ109 ರಡಿ ದಾನವಾಗಿ ಪಡೆಯಲು ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ಇವರು, ನಮೂನೆ 15-ಎ ಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಉಲ್ಲೇಖ (4) ರ ತಹಶೀಲ್ದಾರ್, ಸೊರಬ ಇವರ ಪತ್ರದಲ್ಲಿ ನಮೂನೆ 15-ಎ ಎ ಯಲ್ಲಿ ಮಾಹಿತಿ ಸಲ್ಲಿಸಿರುತ್ತಾರೆ.

ಉಲ್ಲೇಖ (3) ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಸಾಗರ ಇವರ ಪತ್ರದಲ್ಲಿ ಪ್ರಸ್ತಾಪಿತ ಜಮೀನನ್ನು ಅಂದರೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ.ನಂ 20 ರಲ್ಲಿ 1-07, ಸ.ನಂ 21 ರಲ್ಲಿ 0-26 ಮತ್ತು ಸ.ನಂ 22 ರಲ್ಲಿ 1-03 ಒಟ್ಟು ವಿಸ್ತೀರ್ಣ 2-36 ಎಕರೆ ಜಮೀನನ್ನು ಫಾದರ್ ಜೋಸ್ ಪರಪಿಲ್ಲಿಲ್ ಬಿನ್ ಚಾಕೋ, ಅಲಗೊಂಡನಹಳ್ಳಿ ಗ್ರಾಮ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ ಇವರಿಂದ ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕಲಂ 109 ರಡಿ ದಾನವಾಗಿ ಪಡೆಯಲು ಅನುಮತಿ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೈಸೂರು ಸೊಸೈಟೀಸ್ ರಿಜಿಸ್ಟ್ರೇಷ್ನ ಆಕ್ಟ್ 1960 ರಂತೆ ಕರ್ನಾಟಕ ಫ್ರಾನ್ಸಲಿಯನ್ ಸೊಸೈ... ಫಾರಂ, ಹೆಬ್ಬಗೋಡಿ, ಅತ್ತಿಬೆಲೆ, ಬೆಂಗಳೂರು ಎಂದು S.NO.83/72-73 ದಿನಾಂಕ 26-6-1972 ರಂತೆ ... ಯಾಗಿರುತ್ತದೆ.

ಪ್ರಸ್ತಾಪಿತ ಜಮೀನು ಕರ್ನಾಟಕ ಭೂ ಸುಧಾರಣಾ ಕಾಯ್ದೆ, ಇನಾಂ ಅಬಾಲಿಷನ್ ಆಕ್ಟ್, ಭೂ ಮಂಜೂ... ನಿಯಮಾವಳಿಗಳು, ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲವೆಂದು ಚೆಕ್ ಲಿಸ್ಟ್ ನಲ್ಲಿ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯಪತ್ರ ದಿನಾಂಕ 13-8-2015 ರಲ್ಲಿ ಪ್ರಕಟವಾದ Karnataka Act No 33, 2015 ದಿನಾಂಕ 12-8-2015 ರಂತೆ ಕರ್ನಾಟಕ ಭೂಸುದಾರಣಾ ಕಾಯ್ದೆ 1961 ರ ಕಲಂ 109 ರ ತಿದ್ದುಪಡಿ 4 ರ f (ii) ಹಾಗೂ ಕರ್ನಾಟಕ ಭೂ ಸುಧಾರಣಾ ನಿಯಮಾವಳಿಗಳು 1974 ರ ನಿಯಮ 38-ಬಿ (2) (a) ಮತ್ತು (b) ಯಂತೆ ಶೈಕ್ಷಣಿಕ ಉದ್ದೇಶಕ್ಕಾಗಿ 4 ಯೂನಿಟ್ ಜಮೀನನ್ನು ದಾನವಾಗಿ ಪಡೆಯಲು ಜಿಲ್ಲಾಧಿಕಾರಿಗಳು ಅನುಮತಿ ನೀಡಬಹುದಾಗಿರುತ್ತದೆ.

ಈ ಮೇಲೆ ವಿವರಿಸಿರುವಂತೆ ದಾಖಲಾತಿಗಳನ್ನು ಪರಿಶೀಲಿಸಿ, ಈ ಕೆಳಕಾಣಿಸಿದ ಷರತ್ತುಗಳಿಗೊಳಪಡಿಸಿ ಕರ್ನಾಟಕ ಭೂಸುಧಾರಣಾ ಕಾಯ್ದೆ (ತಿದ್ದುಪಡಿ) ಕಾಯ್ದೆ 2003 ರಂತೆ ಕಲಂ 63, 79 ಎ, 79 ಬಿ ಮತ್ತು 80 ಕ್ಕೆ ವಿನಾಯತಿ ನೀಡಿ, ಕಲಂ109 (1) (ii) ರಡಿ ಅಧ್ಯಕ್ಷರು, ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಛತ್ರದಹಳ್ಳಿ ಗ್ರಾಮದ ಸ.ನಂ 20 ರಲ್ಲಿ 1-07, ಸ.ನಂ 21 ರಲ್ಲಿ 0-26 ವ ಸ.ನಂ 22 ರಲ್ಲಿ 1-03 ಒಟ್ಟು ವಿಸ್ತೀರ್ಣ 2-36 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ದಾನವಾಗಿ ಪಡೆಯಲು ಅನುಮತಿ ನೀಡಲಾಗಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೂ ಅದೇ ಉದ್ದೇಶಕ್ಕಾಗಿ, ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಉಪಯೋಗಿಸಿದ ತಕ್ಷಣ ಅಥವಾ ವರ್ಷ ಪೂರ್ಣಗೊಂಡ ತಕ್ಷಣ ಆ ಬಗ್ಗೆ ತಹಶೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ಸದರಿ ಸಂಸ್ಥೆಯವರು ಈ ಯೋಜನೆಯನ್ನು ಪ್ರಾರಂಭಿಸಲು ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆಯತಕ್ಕದ್ದು.
3. ವಿನಾಯತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956 ರ ಕಲಂ 2 ರಲ್ಲಿ ಹೇಳಿರುವಂತೆ, ಶೇಕಡಾ 51 ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ನಿಯಂತ್ರಿತ ಅಥವಾ ಇವೆರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತು ಪಡಿಸಿ ಸದರಿ ಜಮೀನನ್ನು ಬೇರೆ ರೀತಿ ಪೂರ್ವಾನುಮತಿ ಇಲ್ಲದೇ ವರ್ಗಾಯಿಸ ಬಾರದು.
4. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶ ಅಂದರೆ ಶೈಕ್ಷಣಿಕ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಂತೆ ಅನುಮತಿ ಪಡೆಯಬೇಕು.
5. ಈ ಸಂಸ್ಥೆಯು ತಾನು ನಡೆಸುವ ಚಟುವಟಿಕೆಗಳನ್ನು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸಿ ನಡೆಸತಕ್ಕದ್ದು.
6. ಈ ಅನುಮತಿಯು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ಕಲಂ109 ರನ್ವಯ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
7. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯಾ ರದ್ದು ಪಡಿಸಲಾಗುವುದು.ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತಗೊಳಿಸಿಕೊಳ್ಳಲಾಗುವುದು.

ಮೇಲೆ ತಿಳಿಸಿದಂತೆ ಖರೀದಿಸಲು ಅನುಮತಿ ನೀಡಿರುವ ಜಮೀನು ಗೇಣಿ ಜಮೀನೆಂದು ಕಂಡು ಬಂದಲ್ಲಿ ಭೂ ಸುಧಾರಣಾ ಕಾಯ್ದೆಯಂತೆ ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.

ಜಿಲ್ಲಾಧಿಕಾರಿ
ಶಿವಮೊಗ್ಗ ಜಿಲ್ಲೆ.

ಪ್ರತಿಯನ್ನು: -

1) ಕಾರ್ಯದರ್ಶಿಗಳು-1, ಕಂದಾಯ ಇಲಾಖೆ (ಭೂಸು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಸಲ್ಲಿಸಿದೆ.

2) ಉಪವಿಭಾಗಾದಿಕಾರಿಗಳು, ಸಾಗರ ಉಪವಿಭಾಗ, ಸಾಗರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

3) ತಹಶೀಲ್ದಾರ್, ಸೊರಬ ತಾಲ್ಲೂಕು ಸಾಗರ ಇವರಿಗೆ ಮೂಲ ಕಡತದೊಂದಿಗೆ ಕಳುಹಿಸಿದೆ.ಸದರಿ ಸಂಸ್ಥೆಯವರು ಷರತ್ತು (1) ರಲ್ಲಿ ತಿಳಿಸಿರುವಂತೆ, ಸದರಿ ಜಮೀನನ್ನು ಯಾವ ಉದ್ದೇಶಕ್ಕೆ ಖರೀದಿಸಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿದ ಬಗ್ಗೆ ಪ್ರತ್ಯೇಕವಾಗಿ ವಹಿ ನಿರ್ವಹಿಸಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು.

4) ಕರ್ನಾಟಕ ಫ್ರಾನ್ಸಲಿಯನ್ ಸೊಸೈಟಿ, ವಿನಯಾಲಯ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಕಳುಹಿಸಿದೆ.

5) ಉಪನೋಂದಣಾಧಿಕಾರಿಗಳು, ಸೊರಬ ಇವರಿಗೆ ಕಳುಹಿಸಿದೆ.

6) ಕಚೇರಿ ಪ್ರತಿ